**ಎಸ್ .ಕೆ. ಕಲಾ. ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯ,**

**ತಾಳಿಕೋಟಿ,**

**ಕನ್ನಡ ವಿಭಾಗ**

**ಬಿ.ಎ. ಡಿ.ಎಸ್.ಸಿ – ಕನ್ನಡ ಪತ್ರಿಕೆಯ ಫಲಶ್ರುತಿ – 2023–24**

**(ಐಚ್ಛಿಕ ಕನ್ನಡ)**

| ಸೆಮೆಸ್ಟರ್ ಮತ್ತು ಕೋರ್ಸ | ಪತ್ರಿಕೆ | ಕೋರ್ಸಫಲಶ್ರುತಿ |
|---|---|---|
| ಡಿ.ಎಸ್.ಸಿ– ಎ 1 ಸೆಮೆಸ್ಟರ – I | ಪ್ರಾಚೀನ ಕನ್ನಡ ಸಾಹಿತ್ಯ ಚರಿತ್ರೆ | ಪ್ರಸ್ತುತ ಪತ್ರಿಕೆಯು ಕನ್ನಡದ ಆರಂಭಿಕ ಸಾಹಿತ್ಯ ಪ್ರಕಾರಗಳ ನೆಲೆಯ ಬಗೆಗೆ ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಡುವುದು. ಕನ್ನಡದ ಪ್ರಾಚೀನ ಜ್ಞಾನ ಮತ್ತು ಅನನ್ಯತೆಯನ್ನು ಅವರಲ್ಲಿ ತುಂಬುವುದು. ಭಾಷೆಯು ಅಭಿವ್ಯಕ್ತಿಸಿದ ಕನ್ನಡಿಗರ ಬದುಕನ್ನು ಹಾಗೂ ಅವರು ರೂಪಿಸಿದ ಜ್ಞಾನವನ್ನು ಕುರಿತು ವಿದ್ಯಾರ್ಥಿಗಳಿಗೆ ತಿಳಿಸುವುದು. ಆರಂಭಿಕ ಕಾಲಘಟ್ಟದ ಶಾಸನ ಹಾಗೂ ಸಾಹಿತ್ಯ ಪ್ರಕಾರ ಮಾತ್ರವಲ್ಲ. ಅಂದಿನ ಸಂದರ್ಭದ ಸಾಹಿತ್ಯದ ಈ ಪತ್ರಿಕೆಯು ತುರ್ತು ಅಗತ್ಯಗಳನ್ನು ಚರ್ಚಿಸುವುದು ಮೂಲ ಆಶಯವಾಗಿದೆ. ಈ ಮೂಲಕ ಕನ್ನಡ ಭಾಷೆಯು ಅಭಿವ್ಯಕ್ತಿಸಿದ ಕನ್ನಡಿಗರ ಬದುಕನ್ನು ಹಾಗೂ ಅವರು ರೂಪಿಸಿದ ಜ್ಞಾನವನ್ನು ಕುರಿತು ವಿದ್ಯಾರ್ಥಿಗಳಿಗೆ ತಿಳಿಸಿ ಸಮಕಾಲೀನ ಅನಿವಾರ್ಯತೆಗಳ ಜೊತೆಗೆ ಜೋಡಿಸುವುದು ಮತ್ತು ಸಮಕಾಲೀನ ಸವಾಲುಗಳಿಗೆ ಪರಿಹಾರವನ್ನು ಕಂಡುಕೊಳ್ಳುವ ಸಾಧ್ಯತೆಯನ್ನು ಮನವರಿಕೆ ಮಾಡಿಕೊಡುವುದು ಪತ್ರಿಕೆಯ ಉದ್ದೇಶವಾಗಿದೆ. |
| ಡಿ.ಎಸ್.ಸಿ– ಎ 2 ಸೆಮೆಸ್ಟರ – I | ಪ್ರಾಚೀನ ಕನ್ನಡ ಪಠ್ಯಗಳು | ಪ್ರಾಚೀನಕನ್ನಡ ಪ್ರತಿಭೆಯನ್ನು ಅಂದಿನವರು ಅಭಿವ್ಯಕ್ತಿಸಿದ ಮಾಧ್ಯಮಗಳಲ್ಲಿ ಸೂಕ್ಷ್ಮವಾಗಿ ಪರಿಶೀಲಿಸಿ ಕಾವ್ಯಗುಣಗಳ ಮೂಲಕ ಸಮಾಜದ ಒಳಿತನ್ನು ಹಾಗೂ ಸಾಂಸ್ಕೃತಿ ಅಸ್ಮಿತೆಯನ್ನು ನಮ್ಮವರು ಕಂಡುಕೊಂಡ ಪರಿಯನ್ನು ಪ್ರಸ್ತುತ ಕಾವ್ಯ ಭಾಗಗಳಲ್ಲಿ ಗುರುತಿಸಿಕೊಳುವುದು.ಅಲ್ಲದೆ ಕಾವ್ಯ ಮೌಲ್ಯಗಳನ್ನು ಹಾಗೂ ಸಾಮಾಜಿಕ ಮೌಲ್ಯಗಳನ್ನು ಸಮಕಾಲೀನ ಸಂದರ್ಭಗಳಿಗೆ ಜೋಡಿಸುವುದು. |
| ಡಿ.ಎಸ್.ಸಿ– ಎ 3 ಸೆಮೆಸ್ಟರ – II | ಮಧ್ಯಕಾಲೀನ ಕನ್ನಡ ಸಾಹಿತ್ಯ ಚರಿತ್ರೆ | ಮಧ್ಯಕಾಲೀನ ಸಂದರ್ಭದ ಕನ್ನಡಿಗರ ಬದುಕು ಪ್ರಯೋಗಶೀಲವಾದದ್ದು , ಚರಿತ್ರೆಯಲ್ಲಿ ಪದೇ ಪದೇ ನಡೆದ ಯುದ್ಧಗಳು ರಾಜಕೀಯ ಅನಿಶ್ಚಿತತೆಗಳು ಸಾಮಾಜಿಕ , ಸಾಂಸ್ಕೃತಿಕ ಪಲ್ಲಟಗಳ ಜೊತೆಗೆ ಸಾಹಿತ್ಯವು ಹೇಗೆ ಚಳುವಳಿಗಳನ್ನು– ಬದಲಾವಣೆಗಳನ್ನು ತಂದುಕೊಂಡಿತು ಎನ್ನುವುದನ್ನು ಮುಖ್ಯವಾಗಿ ಚರ್ಚಿಸುವುದು. |
| ಡಿ.ಎಸ್.ಸಿ– ಎ 4 ಸೆಮೆಸ್ಟರ – II | ಮಧ್ಯಕಾಲೀನ ಕನ್ನಡ ಸಾಹಿತ್ಯ ಪಠ್ಯಗಳು | ಮಧ್ಯಕಾಲೀನ ಸಂದರ್ಭದ ಕನ್ನಡಿಗರ ಪ್ರತಿಭೆಯ ಚರಿತ್ರೆಯಲ್ಲಿ ವಿರೋಚಿತ ನೆಲೆಗಳಿಂದ ಹಾಗೂ ಹಲವು ಪ್ರಯೋಗಶೀಲ ಭೂಮಿಕೆಗಳಿಂದ ಅಭಿವ್ಯಕ್ತಗೊಂಡಿದೆ. ಮಧ್ಯಕಾಲೀನ ಕನ್ನಡ ಬೌದ್ಧಿಕ ವಲಯ ಹೊಸ ಪ್ರಕಾರಗಳ ಮೂಲಕ ತಮ್ಮ ಚಿಂತನೆಗಳನ್ನು ಹರಿಬಿಟ್ಟಿತು. ಮಾನವ ಇತಿಹಾಸದಲ್ಲಿ ಮಹತ್ವದ ತಿರುವುಗಳಿಗೆ ಈ ಸಂದರ್ಭದ ಸಾಹಿತ್ಯವು ಕಾರಣವಾಯಿತು. ಅದರಲ್ಲಿ ಮುಖ್ಯವಾಗಿ ವಚನ, ರಗಳೆ, ಷಟ್ಪದಿ, ಸಾಂಗತ್ಯ, ತ್ರಿಪದಿ ಹಾಗೂ ಕೀರ್ತನೆ ಪ್ರಕಾರಗಳು ಇಲ್ಲಿ ಅಭಿವ್ಯಕ್ತಿಯ ಮಾಧ್ಯಮವಾದವು. ಆತ್ಮನ್ನೋತಿಗೆ ಅಗತ್ಯವಿರುವ ಭಕ್ತಿ ಚಳುವಳಿ, ವೀರಕಾವ್ಯಗಳು, ತ್ಯಾಗದ ಸಮನ್ವಯದ ಸಮದೃಷ್ಟಿಕೋನಗಳು ಕಾವ್ಯಗಳು ವಿಶ್ವ ಪ್ರಜ್ಞೆಯ ಸಮಾನತೆಯ ಆಶಯಗಳು ಇಲ್ಲಿ ಅಭಿವ್ಯಕ್ತಿಗೊಂಡಿವೆ. ಸಮಕಾಲೀನ ಸಂದರ್ಭದ ಬಿಕ್ಕಟ್ಟುಗಳಿಗೆ ಇಲ್ಲಿನ ಪ್ರಮೇಯಗಳನ್ನು ಜೋಡಿಸಿಕೊಂಡು ಸಮಕಾಲೀನ ಸವಾಲಿಗಳನ್ನು ಪರಿಹರಿಸಿಕೊಳ್ಳಲು ಈ ಪಠ್ಯಗಳನ್ನು ಭುಮಿಕೆಯನ್ನು ಒದಗಿಸುತ್ತದೆ. |
| ಡಿ.ಎಸ್.ಸಿ ಎ 5 ಸೆಮೆಸ್ಟರ – III | ಭಾರತೀಯ ಹಾಗೂ ಪಾಶ್ಚಿಮಾತ್ಯ ಕಾವ್ಯಮೀಮಾಂಸೆ | ಕಾವ್ಯವೆಂಬುದು ನವನವೋನ್ಮೇಶಶಾಲಿನಿ ಕಾವ್ಯದ ಕುರಿತು 'ಇದಂ ಸತ್ಯಂ' ಎಂದು ಹೇಳುವುದು. ಒಂದೇ ಕೃತಿಯನ್ನು ಒಂದೇ ಓದಿನಲ್ಲಿ ಓದಿ ಅರ್ಥೈಸಿಕೊಳುವಂತಹದಲ್ಲ. ಹೀಗೆ ಕಾವ್ಯದ ಕುರಿತಾದ ಅನುಭವಗಳನ್ನು ಹಲವು ಶತಮಾನಗಳಿಂದ ಈ ನಾಡಿನ ಶ್ರೇಷ್ಠ ಮೀಮಾಂಸಕರು ಅಲ್ಲಲ್ಲಿ ತಮ್ಮ ತಮ್ಮ ತಮ್ಮ ಕಾವ್ಯಗಳನ್ನು ವ್ಯಾಖ್ಯಾನಿಸುವ ಪ್ರಯತ್ನವನ್ನು ಮಾಡಿದ್ದಾರೆ. ಕಾಲ ಕಳೆದಂತೆ ಕಾವ್ಯದ ಕುರಿತಾದ ಇಂಥ ಅಭಿಪ್ರಾಯಗಳೇ ಶಾಸ್ತ್ರೀಯ ರೂಪಗಳನ್ನು ಪಡೆದು ಸ್ವಾತಂತ್ರ್ಯ ಕೃತಿಗಳನ್ನು ರಚಿಸಿ, ಕಾವ್ಯ ಮೀಮಾಂಸಾ ಶಾಸ್ತ್ರವನ್ನುಕಟ್ಟಿ ಹೊಸ ಮನ್ವಂತರವನ್ನು ಸೃಷ್ಟಿಸಿದ್ದಾರೆ. ಹೀಗೆ ಕಾವ್ಯಕಲೆಯೇ ಒಂದು ಜಿಜ್ಞಾಸೆಯಾಗಿದೆ. ಕಾವ್ಯವನ್ನು ಅರ್ಥೈಸಿಕೊಳ್ಳುವ ಬೌದ್ಧಿಕತೆ ಅನುಭವ ಜನ್ಯವಾದ ಚರ್ಚೆಗೆ ಒಳಪಡಿಸಿದರು. ಕೇವಲ ಭಾರತೀಯರಲ್ಲದೆ ಪಾಸ್ಚಾತ್ಯರಲ್ಲಿಯು ಈ ಪ್ರವೃತ್ತಿಗಳು ಕಂಡುಬಂದಿವೆ. ಈ ಹಿನ್ನೆಲೆಯಲ್ಲಿ ಎರಡು ಕಾವ್ಯಮೀಮಾಂಸಾ ಪ್ರಕಾರಗಳನ್ನು ವಿದ್ಯಾರ್ಥಿಗಳಿಗೆ |

H.O.D of Kannada
S. K. College of Arts, Comm & Science,
TALIKOTI-586214. Dist-Vijayapur

I Q A C Co-ordinator,
S. K. College of Arts, Comm. &
Science, Talikoti. Dist:Vijayapur

PRINCIPAL
S. K. College of Arts, Comm, & Science
TALIKOTI-586214, Dist-Vijayapur

| | | |
|---|---|---|
| | | ಪರಿಚಯಿಸುವುದು ಈ ಪತ್ರಿಕೆಯ ಉದ್ದೇಶವಾಗಿದೆ. |
| ಡಿ.ಎಸ್.ಸಿ ಎ 6 ಸೆಮಿಸ್ಟರ್ – III | ಕನ್ನಡ ಕಾವ್ಯಮೀಮಾಂಸೆಯ ಆಧುನೀಕ ರೂಪಗಳು | ಕವಿ ಮತ್ತು ಕಾವ್ಯದ ಲಕ್ಷಣಗಳನ್ನು ಕೇಂದ್ರವಾಗಿ ಇಟ್ಟುಕೊಂಡು ಕಾವ್ಯಮೀಮಾಂಸೆ ರಚನೆಗೊಳ್ಳುತ್ತದೆ. ಭರತನಿಂದ ಪ್ರಾರಂಭಗೊಂಡು ಅಭಿನವಗುಪ್ತನವರೆಗೆ ಹಲವಾರು ಭಾರತೀಯ ಲಾಕ್ಷಣೀಕರು ಕವಿ, ಕಾವ್ಯ, ಅಲಂಕಾರ, ಪ್ರತಿಭೆ, ವ್ಯುತ್ಪತ್ತಿ, ರಸ, ರೀತಿ ಹೀಗೆ ಹಲವಾರು ಮೀಮಾಂಸೆಯ ಪರಿಕಲ್ಪನೆಗಳನ್ನು ಚರ್ಚಿಸಿ ಕಾವ್ಯನಿರ್ಮಾಣದ ಚೌಕಟ್ಟಿಗೆ ಅಡಿಪಾಯ ಹಾಕಿದ್ದಾರೆ. ಪಾಶ್ಚಾತ್ಯ ಕಾವ್ಯಮೀಮಾಂಸೆಯು ಇದಕ್ಕೆ ವಿರುದ್ಧವಾಗಿಲ್ಲ. ಅರಿಸ್ಟಾಟಲ್, ಪ್ಲೇಟೋ, ಮ್ಯಾಥ್ಯೂ ಆರ್ನಾಲ್ಡ್, ಲಾಂಜಿನಸ್, ಎಲಿಯಟ್. ಒರಸ್, ಬುಲ್ಲೊ ಇವರು ಹೊಸ ಬಗೆಯ ಕಾವ್ಯಮೀಮಾಂಸೆಯ ಸಾಹಿತ್ಯದ ಚಿಂತನೆಗಳನ್ನು ಹುಟ್ಟು ಹಾಕಿದರು. ಪಾಶ್ಚಾತ್ಯ ಚಿಂತಕರ ವಾದಗಳು ಕನ್ನಡದ ನವೋದಯ, ಪ್ರಗತೀಶೀಲ, ನವ್ಯ, ದಲಿತ ಬಂಡಾಯ ಸಾಹಿತ್ಯದ ಮೇಲೆ ಪ್ರಭಾವವನ್ನುಂಟು ಮಾಡಿದೆ. ಕವಿರಾಜಮಾರ್ಗನಿಂದ ಪ್ರಾರಂಭಗೊಂಡು ಆಧುನೀಕ ಕಾಲದ ಕವಯಿತ್ರಿ ಎಮ್.ಎಸ್.ಆಶಾದೇವಿಯವರಿಗೂ ಕನ್ನಡ ಕಾವ್ಯಮೀಮಾಂಸೆ ವಿಭಿನ್ನ ರಹದರಿಗಳನ್ನು ಸೃಜಿಸಿವೆ. ಆಧುನೀಕ ಕನ್ನಡ ಕಾವ್ಯಮೀಮಾಂಸೆಯು ಜನಮುಖೀ ಮೀಮಾಂಸೆಯಾಗಿ ರಚನೆಗೊಂಡಿದೆ. ಈ ಎಲ್ಲ ಅಂಶಗಳನ್ನು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಡುವುದು ಮುಖ್ಯ ಉದ್ದೇಶವಾಗಿದೆ. |
| ಡಿ.ಎಸ್.ಸಿ ಎ 7 ಸೆಮಿಸ್ಟರ್ – IV | ಸಂಶೋಧನೆ ಮತ್ತು ವಿಮರ್ಶೆ | ಸಂಶೋಧನೆ ಎಂಬುದು ವಿದ್ಯರ್ಥಿಗಳಲ್ಲಿ ಕುತುಹಲವನ್ನು ಬಡಿದೆಬ್ಬಿಸಿ ಹೊಸ ದೃಷ್ಟಿಕೋನ, ಹೊಸ ಚಿಂತನೆ, ಹೊಸ ವಿಧಾನಗಳನ್ನು ಸೃಷ್ಠಿಸಿದರೆ, ವಿಮರ್ಶೆ ಎಂಬುದು ವಿಶ್ಲೆಷಣೆ ಮತ್ತು ಮೌಲ್ಯ ನಿರ್ಣಯಕ್ಕೆ ದಾರಿ ಮಾಡುತ್ತದೆ. ಹೀಗಾಗಿ ಸಂಶೋಧನೆ ಅರ್ಥ, ಸಂಶೋಧನೆಗೆ ಪೂರಕವಾಗುವ ಆಕರ ಸಾಮಗ್ರಿಗಳು, ಆಕರಗಳ ಸಂಗ್ರಹಣೆಗೆ ಕೈಗೊಳ್ಳುವ ಕ್ಷೇತ್ರ ಕಾರ್ಯ, ಸಂಶೋಧನೆಯ ಹಂತಗಳು, ವಿಮರ್ಶೆಯ ಮೂಲ ತತ್ವಗಳು, ವಿಮರ್ಶೆಯ ಪ್ರಕಾರಗಳನ್ನು ಈ ಪಠ್ಯಕ್ರಮದ ಮೂಲಕ ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಡುವುದು. |
| ಡಿ.ಎಸ್.ಸಿ ಎ 8 ಸೆಮಿಸ್ಟರ್ – IV | ಜಾನಪದ ಹಾಗೂ ಮಹಿಳಾ ಸಾಹಿತ್ಯ | ಜಾನಪದ ಸಿದ್ಧಾಂತಗಳು ಮೌಖಿಕ ಮತ್ತು ಭೌತಿಕ ಜಾನಪದ ಕಾವ್ಯಗಳು ಜನಪದ ಮಹಾಕಾವ್ಯಗಳು ಹಾಗೂ ರಂಗಭೂಮಿ ಪ್ರದರ್ಶನ ಕಲೆಗಳ ಕುರಿತು ವಿಶ್ಲೇಷಣಾತ್ಮಕವಾಗಿ ಅಭ್ಯಸಿಸುವುದು. ಜಾನಪದ ಕ್ಷೇತ್ರ ಕಾರ್ಯದಲ್ಲಿ ಪ್ರಶ್ನಾವಳಿ, ವಿಧಾನ, ಸಾಹಿತ್ಯ ಸಂಗ್ರಹ, ವರ್ಗೀಕರಣ, ವಿಶ್ಲೇಷಣೆ ಕುರಿತು ತಿಳಿಸುವುದು. ಮಹಿಳಾ ಸಾಹಿತ್ಯ, ಸ್ತ್ರೀ ವಿಮರ್ಶೆ, ಕನ್ನಡ ಸಾಹಿತ್ಯದಲ್ಲಿ ಮಹಿಳೆಯ ಪ್ರತಿನಿದೀಕರಣ, ಸ್ತ್ರೀ ವಾದದ ಹಿನ್ನೆಲೆ ಕುರಿತು ವಿದ್ಯಾರ್ಥಿಗಳಿಗೆ ಪರಿಚಯಿಸುವ ಉದ್ದೇಶವನ್ನು ಹೊಂದಿದೆ. |
| ಡಿ.ಎಸ್.ಸಿ ಎ 9 ಸೆಮಿಸ್ಟರ್ – V | ಕನ್ನಡ ವ್ಯಾಕರಣ ಪರಂಪರೆ ಶಬ್ಧಮಣಿದರ್ಪಣ | ಕನ್ನಡದ ಆದ್ಯ ವ್ಯಾಕರಣಕಾರ ಕೇಶಿರಾಜನ ಶಬ್ಧಮಣಿದರ್ಪಣದ ಶುದ್ಧಿಗೆ, ಸಂಧಿ, ನಾಮಪ್ರಕರಣಗಳ ಕುರಿತು ವಿದ್ಯಾರ್ಥಿಗಳಿಗೆ ತಿಳಿಸುವುದು. ಕನ್ನಡ ವ್ಯಾಕರಣ ಪರಂಪರೆಯ ಅರ್ಥ, ವ್ಯಾಖ್ಯೆ, ಸ್ವರೂಪ ಪ್ರಯೋಜನಗಳ ಕುರಿತು ಆಳವಾದ ಜ್ಞನವನ್ನು ವಿದ್ಯಾರ್ಥಿಗಳಿಗೆ ನೀಡುವುದು. |
| ಡಿ.ಎಸ್.ಸಿ ಎ 10 ಸೆಮಿಸ್ಟರ್ – V | ಕನ್ನಡ ಭಾಷಾ ವಿಜ್ಞಾನ | ಭಾಷಾ ಅಧ್ಯಯನದ ಕುರಿತಾಗಿ ಭಾಷಾ ವಿಜ್ಞಾನ ಎಂಬ ಪರಿಕಲ್ಪನೆಯು ಜಗತ್ತಿನ ಹಲವು ಭಾಷೆಗಳ ಕುರಿತು ಅಧ್ಯಯನವು ನಿರಂತರವಾಗಿ ನಡೆದುಕೊಂಡು ಬಂದಿದೆ. ಇದಕ್ಕೆ ಕನ್ನಡ ಭಾಷೆಯು ಹೊರತಾಗಿಲ್ಲ. ಈ ಹಿನ್ನೆಲೆಯಲ್ಲಿ ಭಾಷೆಯ ಇತಿಹಾಸ, ಭಾಷೆಯ ವರ್ಗೀಕರಣ, ಸಿದ್ಧಂತಗಳು, ವಿದ್ವಾಂಸರ ಅಭಿಪ್ರಾಯಗಳು, ಭಾಷೆಯ ವೈಶಿಷ್ಟ್ಯಗಳು, ಭಾಷಾ ಬಳಕೆ, ಭಾಷಾ ವಿಜ್ಞಾನದ ಸಮಕಾಲೀನ ಬೆಳವಣಿಗೆಗಳ ಕುರಿತು ವಿದ್ಯಾರ್ಥಿಗಳಿಗೆ ತಿಳುವಳಿಕೆ ಮೂಡಿಸುವುದು. |
| ಡಿ.ಎಸ್.ಸಿ ಎ 11 ಸೆಮಿಸ್ಟರ್ – V | ಕನ್ನಡ ಛಂದಸ್ಸು | ಛಂದಸ್ಸು ಬಹು ಪ್ರಾಚೀನ ಕಾಲದಿಂದಲೂ ಒಂದು ಅಧ್ಯಯನ ಯೋಗ್ಯವಾದ ಶಾಸ್ತ್ರವಾಗಿ ಭರತಖಂಡದಲ್ಲಿ ಬೆಳೆದು ಬಂದಿದೆ. ಛಂದಸ್ಸು ಪಾದದ ಸಹಜ ಸುಂದರ ಸ್ವರಾಂದೋಲನ ಅದು ಪದ್ಯದ ಪ್ರಾಣ. ಕಾವ್ಯಕ್ಕೆ ಚಲನೆಯುಂಟಾಗುವುದು ಛಂದದಿಂದಲೆ. ಕಾವ್ಯದೇವಿಯ ಅಂತರಂಗವು ತರಂಗಿತವಾದಾಗ ಅವಳ ಅಂಗವು ಛಂದೊಂಬುದಿಯಲ್ಲಿ ಚಲಿಸುತ್ತದೆ. ಭಷೆ ಹೇಗೊ ಹಾಗೆ ಛಂದಸ್ಸು. ಛಂದಸ್ಸಿನ ಉಗಮ, ಪ್ರಯೋಜನೆ, ಗಣ. ಖ್ಯಾತಕರ್ನಾಟಕಗಳು, ರಗಳೆ, ಕಂದ, ಷಟ್ಪದಿ, ತ್ರಿಪದಿ, ಅಕ್ಕರ, ಹಿರಿಯಕ್ಕರ ಇವುಗಳ ಜೊತೆಗೆ ಆಧುನಿಕ ಕನ್ನಡ ಛಂದಸ್ಸು, ಸರಳ ರಗಳೆ, ಸುನೀತ, ಪ್ರಗಾತ ಇವುಗಳ ಪ್ರಯೋಜನವನ್ನು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಡುವುದು. |
| ಡಿ.ಎಸ್.ಸಿ ಎ 12 ಸೆಮಿಸ್ಟರ್ – VI | ಕನ್ನಡ ವ್ಯಾಕರಣ ಪರಂಪರೆ ಶಬ್ಧಮಣಿದರ್ಪಣ | ಕನ್ನಡ ವ್ಯಾಕರಣ ಪರಂಪರೆಯ ಆಧುನಿಕ ಚಿಂತನೆಗಳ ಕುರಿತು ಅಭ್ಯಸಿಸವುದು. ಸಮಾಸ ಪ್ರಕರಣ, ಅಖ್ಯಾತ ಪ್ರಕರಣ, ಧಾತು ಪ್ರಕರಣಗಳ ಕುರಿತು ಆಳವಾದ ಜ್ಞಾನವನ್ನು ವಿದ್ಯಾರ್ಥಿಗಳಲ್ಲಿ ಮೂಡಿಸುವುದು. |

**ವೀ.ವಿ.ಸಂಘದ**

**ಎಸ್ .ಕೆ. ಕಲಾ. ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯ,**

**ತಾಳಿಕೋಟಿ,**

**ಕನ್ನಡ ವಿಭಾಗ**

**ಅವಶ್ಯಕ ಕನ್ನಡ ಪತ್ರಿಕೆಯ ಫಲಶ್ರುತಿ – 2023–24**

| ಸೆಮೆಸ್ಟರ್ ಮತ್ತು ಕೋರ್ಸ | ಪಠ್ಯದ ಶೀರ್ಷಿಕೆ | ಕೋರ್ಸಫಲಶ್ರುತಿ |
|---|---|---|
| ಬಿ.ಎ. 1 ಸೆಮೆಸ್ಟರ್ – I | ಬಾ ಫಾಲ್ಗುಣ ರವಿ ದರ್ಶನಕೆ | ಕನ್ನಡ ನಾಡು ನುಡಿ ಪ್ರಜ್ಞೆ, ಪ್ರಕೃತಿ, ಬಾಲ್ಯ ಮತ್ತು ಸಂಕೀರ್ಣಗಳೆಂಬ ನಾಲ್ಕು ಥೀಮ್‌ಗಳನ್ನು ಭೂಮಿಕೆಯನ್ನಾಗಿಟ್ಟುಕೊಂಡು ವಿನ್ಯಾಸಗೊಳಿಸಲಾಗಿದೆ. ಭಾಷಾ ಕೌಶಲ್ಯ ಸಾಹಿತ್ಯದ ಮಾನವೀಯ ಮೌಲ್ಯಗಳ ಸಂವೇದನೆ, ಸಮಕಾಲೀನ ವಿದ್ಯಮಾನಗಳನ್ನು ನಮ್ಮ ಸಂಸ್ಕೃತಿ, ರಾಷ್ಟ್ರೀಯತೆ ಮನೋಭಾವದ ಅರಿವನ್ನು ವಿದ್ಯಾರ್ಥಿಗಳಲ್ಲಿ ಮೂಡಿಸುವುದು. ಬೌದ್ಧಿಕ, ಶೈಕ್ಷಣಿಕ, ಸಾಂಸ್ಕೃತಿಕ, ಸಾಮಾಜಿಕ, ನೈತಿಕ ಅಭಿರುಚಿಗಳನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವುದು. |
| ಬಿ.ಎ. 1 ಸೆಮೆಸ್ಟರ್ – II | ಮುತ್ತಿನ ಹಾರ | ಆಧುನೀಕತೆ, ಸಮಾಜ, ಪ್ರೀತಿ ಮತ್ತು ಸಂಕೀರ್ಣಗಳೆಂಬ ನಾಲ್ಕು ಥೀಮ್‌ಗಳನ್ನು ಭೂಮಿಕೆಯನ್ನಾಗಿಟ್ಟುಕೊಂಡು ವಿನ್ಯಾಸಗೊಳಿಸಲಾಗಿದೆ. ಕನ್ನಡ ಸಾಹಿತ್ಯದ ರೂಪವೈವಿಧ್ಯತೆಯ ಪರಿಚಯದೊಂದಿಗೆ ಪ್ರಾದೇಶಿಕತೆ, ಸಾಮಾಜಿಕ ನ್ಯಾಯ, ಹಳಗನ್ನಡ ಮೊದಲುಗೊಂಡು ಆಧುನಿಕ ಕನ್ನಡದವರೆಗೆ ವಿದ್ಯಾರ್ಥಿಗಳಿಗೆ ವಿಷಯ ಜ್ಞಾನ ಮೂಡಿಸುವುದು. ಪ್ರಾದೇಶಿಕ ಅಂಶಗಳನ್ನು ಬಳಸಿಕೊಂಡು ಜಾಗತೀಕ ಮಟ್ಟದ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ನೀಡುವುದು. |
| ಬಿ.ಎ. 2 ಸೆಮೆಸ್ಟರ್ – III | ಮಳೆಯ ಹಬ್ಬಕ್ಕೆ ನೀರೆ ಔತಣ | ರಾಷ್ಟ್ರೀಯತೆ, ಕೃಷಿ, ಕ್ರೀಡೆ, ಸಂಕೀರ್ಣಗಳೆಂಬ ನಾಲ್ಕು ಥೀಮ್‌ಗಳನ್ನು ಭೂಮಿಕೆಯನ್ನಾಗಿಟ್ಟುಕೊಂಡು ವಿನ್ಯಾಸಗೊಳಿಸಲಾಗಿದೆ. ವಿದ್ಯಾರ್ಥಿಗಳಲ್ಲಿ ಸಾಮರ್ಥ್ಯ, ಸಂವರ್ಧನೆಗೆ ಅಗತ್ಯವಿರುವ ಭಾಷಿಕ, ಬೌದ್ಧಿಕ, ಶೈಕ್ಷಣಿಕ, ವ್ಯವಹಾರಿಕ, ನೈತಿಕ ಮತ್ತು ಸಾಂಸ್ಕೃತಿಕ ಕಾಳಜಿಗಳನ್ನು ಗಮನದಲ್ಲಿಟ್ಟುಕೊಂಡು ಮಾನವೀಕರಣ ಪ್ರಕ್ರಿಯೆಯ ಉಪಕ್ರಮವಾಗಿ ಚರ್ಚಿಸಲಾಗಿದೆ. ವಿದ್ಯಾರ್ಥಿಗಳು ಇವುಗಳ ಅರಿವನ್ನು ಪಡೆಯುವರು. |
| ಬಿ.ಎ. 2 ಸೆಮೆಸ್ಟರ್ – IV | ಮೋಕ್ಷ ಹುಡುಕುತ್ತ ಪ್ರೀತಿಯ ಬಂಧನದಲ್ಲಿ | ಕಾಯಕ, ಬಡತನ, ಕಾಲ, ಸಂಕೀರ್ಣಗಳೆಂಬ ನಾಲ್ಕು ಥೀಮ್‌ಗಳನ್ನು ಭೂಮಿಕೆಯನ್ನಾಗಿಟ್ಟುಕೊಂಡು ವಿನ್ಯಾಸಗೊಳಿಸಲಾಗಿದೆ. ಸಾಂಪ್ರದಾಯಿಕ ಶಿಕ್ಷಣ ಕ್ರಮಕ್ಕಿಂತ ವಿಭಿನ್ನವಾದ ಶಿಕ್ಷಣ ನೀತಿ ಇಂದಿನದಾಗಿದೆ. ವಿದ್ಯಾರ್ಥಿಗಳಿಗೆ ಜ್ಞಾನ ಸಂಪಾದನೆ ಮತ್ತು ಉದ್ಯೋಗ ಸಂಪಾದನೆ ಮುಖ್ಯವಾದುದು ಬದಲಾಗುತ್ತಿರುವ ಪ್ರಾದೇಶಿಕತೆ, ರಾಷ್ಟ್ರೀಯತೆ ಹಾಗೂ ಜಾಗತೀಕ ವಿದ್ಯಮಾನಗಳಿಗೆ ಅನುಗುಣವಾಗಿ ಮಾದರಿ ಶಿಕ್ಷಣದ ಜೊತೆಗೆ ಬದುಕಿನಲ್ಲಿ ಬಂದೊದಗುವ ಸಮಸ್ಯೆಗಳನ್ನು ಎದುರಿಸಿ ಬದುಕುವ ಸಾಮರ್ಥ್ಯವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವುದು. |
| ಬಿ.ಕಾಂ 1 ಸೆಮೆಸ್ಟರ್ – I | ಕನ್ನಡವೇ ನನ್ನ ಧರ್ಮ | ಕನ್ನಡ ನಾಡು ನುಡಿ ಪ್ರಜ್ಞೆ, ಸಂಸ್ಕೃತಿ, ಜಾಗತೀಕರಣ ಮತ್ತು ಸಂಕೀರ್ಣಗಳೆಂಬ ನಾಲ್ಕು ಥೀಮ್‌ಗಳನ್ನು ಭೂಮಿಕೆಯನ್ನಾಗಿಟ್ಟುಕೊಂಡು ವಿನ್ಯಾಸಗೊಳಿಸಲಾಗಿದೆ. ಬೌದ್ಧಿಕ, ಶೈಕ್ಷಣಿಕ, ಸಾಂಸ್ಕೃತಿಕ, ಸಾಮಾಜಿಕ, ನೈತಿಕ ಅಭಿರುಚಿಗಳನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವುದು. ಕನ್ನಡ ನಾಡು ನುಡಿ ಚಿಂತನೆ, ಸಂಸ್ಕೃತಿ, ರಾಷ್ಟ್ರೀಯತೆಯ ಕುರಿತು ಅರಿವು ಮೂಡಿಸುವುದು. |
| ಬಿ.ಕಾಂ 1 ಸೆಮೆಸ್ಟರ್ – II | ಸಾಧನೆಗೆ ಕೊನೆಯಲ್ಲ | ಸೌಂದರ್ಯ, ಭಕ್ತಿ, ದೇಸೀಯತೆ, ಸಂಕೀರ್ಣಗಳೆಂಬ ನಾಲ್ಕು ಥೀಮ್‌ಗಳನ್ನು ಭೂಮಿಕೆಯನ್ನಾಗಿಟ್ಟುಕೊಂಡು ವಿನ್ಯಾಸಗೊಳಿಸಲಾಗಿದೆ. ಭಾಷಾ ಕೌಶಲ್ಯ ಸಾಹಿತ್ಯದ ಮಾನವೀಯ ಮೌಲ್ಯಗಳ ಸಂವೇದನೆ, ಸಮಕಾಲೀನ ವಿದ್ಯಮಾನಗಳನ್ನು ನಮ್ಮ ಸಂಸ್ಕೃತಿ, ರಾಷ್ಟ್ರೀಯತೆ ಮನೋಭಾವದ ಅರಿವನ್ನು ವಿದ್ಯಾರ್ಥಿಗಳಲ್ಲಿ ಮೂಡಿಸುವುದು. ಬೌದ್ಧಿಕ, ಶೈಕ್ಷಣಿಕ, ಸಾಂಸ್ಕೃತಿಕ, ಸಾಮಾಜಿಕ, ನೈತಿಕ ಅಭಿರುಚಿಗಳನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವುದು. |
| ಬಿ.ಕಾಂ 2 ಸೆಮೆಸ್ಟರ್ – III | ನನ್ನ ಬಣ್ಣದ ಬದುಕು | ಮನರಂಜನಾ ಮಾಧ್ಯಮ, ಮಾರುಕಟ್ಟೆ, ಲಿಂಗ ಸಮಾನತೆ, ಸಂಕೀರ್ಣಗಳೆಂಬ ನಾಲ್ಕು ಥೀಮ್‌ಗಳನ್ನು ಭೂಮಿಕೆಯನ್ನಾಗಿಟ್ಟುಕೊಂಡು ವಿನ್ಯಾಸಗೊಳಿಸಲಾಗಿದೆ. ಸಾಂಪ್ರದಾಯಿಕ ಶಿಕ್ಷಣ ಕ್ರಮಕ್ಕಿಂತ ವಿಭಿನ್ನವಾದ ಶಿಕ್ಷಣ ನೀತಿ ಇಂದಿನದಾಗಿದೆ. ವಿದ್ಯಾರ್ಥಿಗಳಿಗೆ ಜ್ಞಾನ ಸಂಪಾದನೆ ಮತ್ತು ಉದ್ಯೋಗ ಸಂಪಾದನೆ ಮುಖ್ಯವಾದುದು ಬದಲಾಗುತ್ತಿರುವ ಪ್ರಾದೇಶಿಕತೆ, ರಾಷ್ಟ್ರೀಯತೆ ಹಾಗೂ ಜಾಗತೀಕ ವಿದ್ಯಮಾನಗಳಿಗೆ ಅನುಗುಣವಾಗಿ ಮಾದರಿ ಶಿಕ್ಷಣದ ಜೊತೆಗೆ ಬದುಕಿನಲ್ಲಿ ಬಂದೊದಗುವ ಸಮಸ್ಯೆಗಳನ್ನು ಎದುರಿಸಿ ಬದುಕುವ ಸಾಮರ್ಥ್ಯವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವುದು. |

| | | |
|---|---|---|
| ಬಿ.ಕಾಂ 2 ಸೆಮಿಸ್ಟರ್ – IV | ಕಡಲ ನೀರು | ಕಡಲು, ಸಹಬಾಳ್ವೆ, ಸಾವು, ಸಂಕೀರ್ಣಗಳೆಂಬ ನಾಲ್ಕು ಥೀಮ್‌ಗಳನ್ನು ಭೂಮಿಕೆಯನ್ನಾಗಿಟ್ಟುಕೊಂಡು ವಿನ್ಯಾಸಗೊಳಿಸಲಾಗಿದೆ. ಉದ್ಯೋಗಾಧಾರಿತ, ಜ್ಞಾನಾಧಾರಿತ, ಕೌಶಲ್ಯಾಧಾರಿತ, ಸ್ಪರ್ಧಾತ್ಮಕ ಮತ್ತು ಮಾಹಿತಿ ತಂತ್ರಜ್ಞಾನ ಸಂಗತಿಗಳತ್ತ ಗಮನ ಕೊಡುತ್ತ ಸಾಂಸ್ಕೃತಿಕ ಸಂವೇಧನೆಗಳಿಗೆ, ಮಾನವೀಯತೆ, ರಾಷ್ಟ್ರೀಯತೆ ಮುಂತಾದ ಮಹತ್ವದ ಅಂಶಗಳು ಇಲ್ಲಿಯ ಪಠ್ಯಗಳಾಗಿ ವಿದ್ಯಾರ್ಥಿಗಳಿಗೆ ಪ್ರೇರಕವಾಗಿವೆ. |
| ಬಿ.ಎಸ್.ಸಿ 1 ಸೆಮಿಸ್ಟರ್ – I | ಕನ್ನಡ ಸಂವರ್ಧನೆ | ಕನ್ನಡ ನಾಡು ನುಡಿ ಪ್ರಜ್ಞೆ, ಭೂಮಿ, ವೈಜ್ಞಾನಿಕ ಮನೋಧರ್ಮ, ಸಂಕೀರ್ಣಗಳೆಂಬ ನಾಲ್ಕು ಥೀಮ್‌ಗಳನ್ನು ಭೂಮಿಕೆಯನ್ನಾಗಿಟ್ಟುಕೊಂಡು ವಿನ್ಯಾಸಗೊಳಿಸಲಾಗಿದೆ. ಭಾಷಾ ಕೌಶಲ್ಯ ಸಾಹಿತ್ಯದ ಮಾನವೀಯ ಮೌಲ್ಯಗಳ ಸಂವೇದನೆ, ಸಮಕಾಲೀನ ವಿದ್ಯಮಾನಗಳನ್ನು ನಮ್ಮ ಸಂಸ್ಕೃತಿ, ರಾಷ್ಟ್ರೀಯತೆ ಮನೋಭಾವದ ಅರಿವನ್ನು ವಿದ್ಯಾರ್ಥಿಗಳಲ್ಲಿ ಮೂಡಿಸುವುದು. ಬೌದ್ಧಿಕ, ಶೈಕ್ಷಣಿಕ, ಸಾಂಸ್ಕೃತಿಕ, ಸಾಮಾಜಿಕ, ನೈತಿಕ ಅಭಿರುಚಿಗಳನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವುದು. |
| ಬಿ.ಎಸ್.ಸಿ 1 ಸೆಮಿಸ್ಟರ್ – II | ತೆರೆದಮನ | ಜೀವನ ಕಲೆ, ಕನಸು, ಮಳೆ, ಸಂಕೀರ್ಣಗಳೆಂಬ ನಾಲ್ಕು ಥೀಮ್‌ಗಳನ್ನು ಭೂಮಿಕೆಯನ್ನಾಗಿಟ್ಟುಕೊಂಡು ವಿನ್ಯಾಸಗೊಳಿಸಲಾಗಿದೆ. ವಿದ್ಯಾರ್ಥಿಗಳಲ್ಲಿ ಸಾಮರ್ಥ್ಯ, ಸಂವರ್ಧನೆಗೆ ಅಗತ್ಯವಿರುವ ಭಾಷಿಕ, ಬೌದ್ಧಿಕ, ಶೈಕ್ಷಣಿಕ, ವ್ಯವಹಾರಿಕ, ನೈತಿಕ ಮತ್ತು ಸಾಂಸ್ಕೃತಿಕ ಕಾಳಜಿಗಳನ್ನು ಗಮನದಲ್ಲಿಟ್ಟುಕೊಂಡು ಮಾನವೀಕರಣ ಪ್ರಕ್ರಿಯೆಯ ಉಪಕ್ರಮವಾಗಿ ಚರ್ಚಿಸಲಾಗಿದೆ. ವಿದ್ಯಾರ್ಥಿಗಳು ಇವುಗಳ ಅರಿವನ್ನು ಪಡೆಯುವರು. |
| ಬಿ.ಎಸ್.ಸಿ 2 ಸೆಮಿಸ್ಟರ್ – III | ದಾರಿಯ ಬುತ್ತಿ | ಮಾನವೀಯತೆ, ಪ್ರವಾಸ, ವಿಚಾರ ಕ್ರಾಂತಿ, ಸಂಕೀರ್ಣಗಳೆಂಬ ನಾಲ್ಕು ಥೀಮ್‌ಗಳನ್ನು ಭೂಮಿಕೆಯನ್ನಾಗಿಟ್ಟುಕೊಂಡು ವಿನ್ಯಾಸಗೊಳಿಸಲಾಗಿದೆ. ಇಲ್ಲಿಯ ಪಠ್ಯಗಳು ಪರಿಸರ ಸಂರಕ್ಷಣೆ, ವೈಜ್ಞಾನಿಕ ಮನೋಭಾವ, ವೈಚಾರಿಕ ಮನೋಧರ್ಮ, ಪ್ರಗತಿಪರ ಚಿಂತನೆ, ಅಪರಿಚಿತ ಸಂಗತಿಗಳೆಡಗಿನ ಕುತೂಹಲ, ಸಾಹಿತ್ಯದ ಅಭಿರುಚಿ, ಜ್ಞಾನಾರ್ಜಜನೆ, ಬೌದ್ಧಿಕ ಶೀಲತೆ, ಸೃಜನಶೀಲತೆಯಂತಹ ಗುಣಗಳನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವ ಉದ್ದೇಶವನ್ನು ಹೊಂದಿದೆ. |
| ಬಿ.ಎಸ್.ಸಿ 2 ಸೆಮಿಸ್ಟರ್ – IV | ಕುಲ ಕುಲವೆಂದು ಹೊಡೆದಾಡದಿರಿ | ದಮನಿತ ಲೋಕ, ಸಹಿಷ್ಣುತೆ, ಶ್ರೀ ಸಾಮಾನ್ಯ ಬದುಕು, ಸಂಕೀರ್ಣಗಳೆಂಬ ನಾಲ್ಕು ಥೀಮ್‌ಗಳನ್ನು ಭೂಮಿಕೆಯನ್ನಾಗಿಟ್ಟುಕೊಂಡು ವಿನ್ಯಾಸಗೊಳಿಸಲಾಗಿದೆ. ಬೌದ್ಧಿಕ, ಶೈಕ್ಷಣಿಕ, ಸಾಂಸ್ಕೃತಿಕ, ಸಾಮಾಜಿಕ, ನೈತಿಕ ಅಭಿರುಚಿಗಳನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವುದು. ವಿಶ್ವದ ವಿದ್ಯಮಾನಗಳು, ಸಮಕಾಲೀನ ಸಂವೇದನೆಗಳು, ಸರ್ವಕಾಲಿಕ ಮೌಲ್ಯಗಳ ಪ್ರಜ್ಞೆಯನ್ನು ವಿದ್ಯಾರ್ಥಿಗಲಲ್ಲಿ ಮೂಡಿಸುವುದು. |

H.O.D of Kannada
S. K. College of Arts, Comm & Science,
TALIKOTI-586214. Dist-Vijayapur

PRINCIPAL
S. K. College of Arts, Comm, & Science
TALIKOTI-586214, Dist-Vijayapur

I Q A C Co-ordinator,
S. K. College of Arts, Comm. &
Science, Talikoti. Dist:Vijayapur